**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 748/2017**

ಚಾಸಾಃ 4
ಫ್ರಾಸಾಃ 3

**ದಿನಾಂಕಃ 10-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಚಂದ್ರು |
| ತಂದೆಯ/ಗಂಡನ ಹೆಸರು | ಃ | ಮಹೇಶ್ |
| ವಯಸ್ಸು | ಃ | 27 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸ ಸ್ಥಳ | ಃ | ತಿಪಟೂರು |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ನ್ಯಾಯಾಲಯದ ಮುಂದೆ ಇರುವ 1 ಮತ್ತು 4 ನೇ ಆರೋಪಿಗಳು ನನಗೆ ಗೊತ್ತು, 3 ಮತು 2 ನೇ ಆರೋಪಿಯವರು ಗೈರು ಹಾಜರು ಇರುವುದರಿಂದ ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ 2 ದಾಖಲಾತಿಗಳನ್ನು ತೋರಿಸಿ ಅದು ಆರೋಪಿಗಳು ತೋರಿಸಿದ ಸ್ಥಳ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆ ಆಗಿರುತ್ತದೆ ಸಾಕ್ಷಿ ಅವರ ಸಹಿಯನ್ನು ಗುರುತಿಸಿರುವುದರಿಂದ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಮತ್ತು 4(ಎ) ಎಂದು ಗುರುತಿಸಲಾಗಿದೆ. ನಿಪಿ-3 ಮತ್ತು 4 ನ್ನು ಆರೋಪಿಗಳು ತೋರಿಸಿರುವ ಜಾಗದಿಂದ 14 ರಿಂದ 15 ಸಾವಿರ ರೂಪಾಯಿ ಹಣವನ್ನು ಮತ್ತು 6 ಮೊಬೈಲ್ ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಿಪಿ-3 ಮತ್ತು 4 ನ್ನು ಚಿಕ್ಕನಾಯಕನಹಳ್ಳಿ ಕೆರೆ ಹತ್ತಿರ ಗೋಡೆಕೆರೆ ಹತ್ತಿರ ಮಧ್ಯಾಹ್ನ 3-30 ಗಂಟೆ ಸಮಯಕ್ಕೆ ಬರೆದಿರುತ್ತಾರೆ. ನನ್ನ ಮುಂದೆ ನಿಪಿ-3 ಮತ್ತು 4 ನ್ನು ಬರೆದಿರುತ್ತಾರೆ ಅದಕ್ಕೆ ನಾನು ಸಹಿಯನ್ನು ಹಾಕಿರುತ್ತೇನೆ. ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನಾನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

**ನನ್ನ ಮುಂದೆ ನಿಪಿ-3 ಮತ್ತು 4 ನ್ನು ಬರೆಯುವ ಸಂದರ್ಭದಲ್ಲಿ 6 ಮೊಬೈಲ್ , 2 ಚಾಕು, 1 ಲಾಂಗ್ ಮಚ್ ಮತ್ತು ಒಂದು ಇಂಡಿಕಾ ಕಾರನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಈ ವಿಚಾರವಾಗಿ ದಿಃ 24-03-2017 ರಂದು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.**

ಪಾಟೀ ಸವಾಲು ಶ್ರೀ ಎಂಬಿಕೆ ವಕೀಲರಿಂದಃ **2** ನೇ ಆರೋಪಿಯ ಪರವಾಗಿ

ತಿಪಟೂರಿನಲ್ಲಿರುವ ಬಿ.ಹೆಚ್ ರಸ್ತೆಯಲ್ಲಿ ಇರುವ ಏರ್ ಟೆಲ್ ಆಫೀಸಿನಲ್ಲಿ 6 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಕೆಲಸದ ನಿಮಿತ್ತ ತುಮಕೂರಿಗೆ ನನ್ನ ದ್ವಿಚಕ್ರ ವಾಹನದಲ್ಲಿ 11 ಗಂಟೆಗೆ ಹೋಗುತ್ತೇನೆ. ನನ್ನ ಸ್ನೇಹಿತರ ದ್ವಿಚಕ್ರ ವಾಹನದಲ್ಲಿ ಹೋಗಿರುತ್ತೇನೆ ಅದರ ಸಂಖ್ಯೆ ಈಗ ನನಗೆ ನೆನಪಿಲ್ಲ. ನನ್ನ ಸಿಮ್ ನ್ನು ಪೋಸ್ಟ್‌ಪೇಯಿಡ್ ಆಕ್ಟಿವೇಷನ್‌ಗೋಸ್ಕರ ತುಮಕೂರಿಗೆ ಹೋಗಿರುತ್ತೇನೆ. ಆ ಸಮಯದಲ್ಲಿ ತುಮಕೂರಿಗೆ ತಿಪಟೂರು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಿಂದ 10-10 ನಿಮಿಷಕ್ಕೆ ಬಸ್ ಗಳು ಇವೆ ಎಂದರೆ ಸರಿ. ತಿಮ್ಲಾಪುರದಲ್ಲಿ ನನ್ನ ನೆಂಟರ ಮನೆ ಇದೆ ಅಲ್ಲಿ ನಾನು ಅವರನ್ನು ಮಾತಾಡಿಸಿಕೊಂಡು ಅಲ್ಲಿಂದ ನಾನು ತುಮಕೂರಿಗೆ ಹೋಗಬೇಕಾಯಿತು. ತಿಪಟೂರಿನಿಂದ ತಿಮ್ಲಾಪುರಕ್ಕೆ ಹೋಗಲು ಅರ್ಧ ಗಂಟೆ ಆಗಿರುತ್ತದೆ. ತಿಮ್ಲಾಪುರದಲ್ಲಿ ನಮ್ಮ ಅತ್ತೆಯಾದ ಸುಶೀಲಮ್ಮ ರವರ ಮನೆ ಇದೆ. ತಿಮ್ಲಾಪುರದಲ್ಲಿ ನಾನು ಕಾಲು ಗಂಟೆ ಇದ್ದೆ. ನಾನು ತಿಮ್ಲಾಪುರದಿಂದ ಕೆ.ಬಿ ಕ್ರಾಸ್ ಗೆ ಹೋಗುವಾಗ ಈ ಕೇಸಿನಲ್ಲಿ ಸಾಕ್ಷಿಯಾಗಬೇಕೆಂದು ನನಗೆ ಲಿಖಿತವಾಗಿ ಪೊಲೀಸರು ನೋಟೀಸನ್ನು ಕೊಟ್ಟಿರುತ್ತಾರೆ. ಸದರಿ ನೋಟೀಸನ್ನು ನಾನು ಸಹಿ ಮಾಡಿ ಪಡೆದುಕೊಂಡಿರುತ್ತೇನೆ. ನನ್ನ ಜೊತೆ ಬೇರೊಬ್ಬ ವ್ಯಕ್ತಿ ಸಹಿ ಮಾಡಿದ್ದಾರೆ ಆದರೆ ಅವರ ಹೆಸರು ನನಗೆ ಗೊತ್ತಿಲ್ಲ ಮತ್ತು ಅವರು ಪರಿಚಯ ಇಲ್ಲ. ನಾನು ಈ ವಿಚಾರವಾಗಿ ನಾನು ನನ್ನ ಹೇಳಿಕೆಯಲ್ಲಿ ತಿಮ್ಲಾಪುರದಿಂದ ತುಮಕೂರಿಗೆ ಹೋಗುವ ಸಮೀಪದಲ್ಲಿ ಪೊಲೀಸರು ನನ್ನನ್ನು ಈ ಕೇಸಿನಲ್ಲಿ ಕರೆದಿದ್ದಾರೆ ಎಂದು ನಾನು ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಎಲ್ಲಾ ಸಹಿಗಳನ್ನು ನಾನು ಪೊಲೀಸ್ ಠಾಣೆಯಲ್ಲಿ ಹಾಕಿದ್ದೀನಿ ಎಂದರೆ ಸರಿಯಲ್ಲ. ನಾನು ಸ್ಥಳವಾದ ಗೋಡೆಕೆರೆಯಲ್ಲಿ ಮಹಜರ್ ಗಳಿಗೆ ಸಹಿ ಮಾಡಿರುತ್ತೇನೆ. ಎಷ್ಟು ಹೊತ್ತಿಗೆ ಗೋಡೆಕೆರೆಗೆ ಹೋಗಿದ್ದೀನಿ ಎನ್ನುವುದು ನನಗೆ ನೆನಪಿಲ್ಲ. ನಾನು ಎಷ್ಟು ಹೊತ್ತಿಗೆ ಅಲ್ಲಿ ಹೋಗಿದ್ದೇನೆ ಎನ್ನುವುದು ನನಗೆ ಮರೆ ಹೋಗಿದೆ. ಕೆರೆ ಪಕ್ಕ ಇರುವ ಸುತ್ತ ಮುತ್ತ ಇದ್ದ 4-5 ಜನ ಸ್ಥಳಕ್ಕೆ ಬಂದಿರುತ್ತಾರೆ. ಕೆರೆಯಲ್ಲಿರುವ ಸ್ಥಳೀಯರ ಸಹಿಯನ್ನು

ಪೊಲೀಸರು ನಿಪಿ-3 ಮತ್ತು 4 ಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಸ್ಥಳದ ಚೆಕ್ಕುಬಂಧಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ತೋಟ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಕೆರೆ ಇತ್ತು ಯಾವ ಕೆರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಅದನ್ನು ಗೋಡೆಕೆರೆ ಎಂದು ಕರೆಯುತ್ತಾರೆ. ನಿಪಿ-3 ಮತ್ತು 4 ರಲ್ಲಿರುವ ಅಂಶಗಳನ್ನು ತಿಳಿದುಕೊಂಡು ನನ್ನ ಸಹಿಯನ್ನು ನಾನು ಮಾಡಿರುತ್ತೇನೆ. ನೋಟೀಸು ಮತ್ತು ಎಲ್ಲಾ ದಾಖಲಾತಿಗಳನ್ನು ಸೇರಿ 3-4 ಸಹಿಗಳನ್ನು ಮಾಡಿರುತ್ತೇನೆ. ಯಾವ ನೋಟೀಸಿನ ಡಿನಾಮಿನೇಷನ್ ಎಂದು ನನಗೆ ಗೊತ್ತಿಲ್ಲ ಮತ್ತು ಅದರಲ್ಲಿ 14 ಸಾವಿರ ರೂಪಾಯಿ ಇತ್ತ ಎಂದು ಕೌಂಟ್ ಮಾಡಿರುವುದಿಲ್ಲ. ಅಲ್ಲಿ ದುಡ್ಡು ಇತ್ತು ಆದರೆ ಅದನ್ನು ನಾನು ಮುಟ್ಟಿರುವುದಿಲ್ಲ. ಮರದ ಹಿಡಿ, ಬಿಳಿ ಬಣ್ಣದ ಇಂಡಿಕಾ ಕಾರು ಅದರ ಸಂಖ್ಯೆ ನನಗೆ ಈಗ ನೆನಪಿಲ್ಲ ಆದರೆ ನಾನು ನೋಡಿರುತ್ತೇನೆ. ಸದರಿ ಅಮಾನತ್ತು ಪಡಿಸಿಕೊಂಡಿರುವ ವಸ್ತುಗಳ ಮೇಲೆ ನನ್ನ ಸಹಿಯನ್ನು ಪೊಲೀಸರು ಪಡೆದುಕೊಂಡಿಲ್ಲ. ಪೊಲೀಸರ ಬುಲೆರೋ ಜೀಪ್ ನಲ್ಲಿ ಠಾಣೆಯಿಂದ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಸ್ಥಳದಲ್ಲಿ ನಿಪಿ-3 ಮತ್ತು 4 ನ್ನು ಯಾರು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ಯಾರು ಎಂದು ನನಗೆ ಗೊತ್ತಿಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಗೊತ್ತಿಲ್ಲ ಪೊಲೀಸಸರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿತಾ ಇದ್ದೀನಿ ಎಂದರೆ ಸರಿಯಲ್ಲ. ಒಂದು ಲೆಟರ್ ನಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ನಾನು ಸಹಿ ಮಾಡಿರುತ್ತೇನೆ ಮತ್ತು ಠಾಣೆಗೆ ಬಂದು ಒಂದು ಸಹಿ ಮಾಡಿದೀನಿ. ಒಟ್ಟಾರೆ ನಾನು 4-5 ಸಹಿಗಳನ್ನು ಮಾಡಿರುತ್ತೇನೆ. ನನಗೆ ತೊಡೆ ಮೇಲೆ ಇಟ್ಟು ಸಹಿ ಮಾಡಲು ಕಷ್ಟ ಇತ್ತು ಪೊಲೀಸರು ಯಾವ ರೀತಿ ಬರೆದಿದರು ಎಂದು ಪ್ರಶ್ನಿಸಿದಾಗ ಸಾಕ್ಷಿ ತುಂಬಾ ವರ್ಷ ಆಗಿದ್ದರಿಂದ ನನಗೆ ಕಷ್ಟ ಆಗಿದೆ ಎನ್ನುತ್ತಾರೆ. ನಾನು ಸ್ಥಳಕ್ಕೆ ಹೋಗಿಲ್ಲ ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿತಾ ಇದ್ದೀನಿ ಎಂದರೆ ಸರಿಯಲ್ಲ ಸಾಕ್ಷಿ ಮುಂದೆವರೆದು ನನ್ನ ಪೋಟೋವನ್ನು ಸ್ಥಳದಲ್ಲಿ ಪೊಲೀಸರು ತೆಗೆದಿದ್ದಾರೆ ಎನ್ನುತ್ತಾರೆ. ನಾನು ಸ್ಥಳಕ್ಕೆ ಹೋಗಿದ್ದರೆ ಅಮಾನತ್ತು ಮಹಜರ್ ಬರೆದಿರುವ ಕೆರೆಯ ಹೆಸರನ್ನು ಹೇಳುತ್ತಿದ್ದೆ ಅಲ್ಲಿ ಹೋಗಿಲ್ಲ ಆದ್ದರಿಂದ ಅದರ ಹೆಸರು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಗೋಡೆಕೆರೆ ಗೇಟಿನಿಂದ ಗೋಡೆಕೆರೆ ಗ್ರಾಮಕ್ಕೆ 1 ವರೆ ಯಿಂದ 2 ಕಿ.ಮೀ ಆಗುತ್ತದೆ. ಗೋಡೆಕೆರೆಯಲ್ಲಿ ಸಿದ್ಧರಾಮೇಶ್ವರ ದೇವಸ್ಥಾನ ಇದೆ ಅದೇ ರೀತಿ ತೋಪವನ ಇದೆ ಎಂದರೆ ಸಾಕ್ಷಿ ನಾನು ಅದನ್ನು ಗಮನಿಸಿರುವುದಿಲ್ಲ ಎನ್ನುತ್ತಾರೆ . ಗೋಡೆಕೆರೆ ದೇವಸ್ಥಾನ ಬಿಟ್ಟು ಯಾವ ಕಡೆ ಹೋಗಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಗೋಡೆಕೆರೆಯಿಂದ ಬಲಭಾಗಕ್ಕೆ ತಿರುಗಿದರು ಯಾವ ಭಾಗಕ್ಕೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಗೋಡೆಕೆರೆಯಲ್ಲಿ ಎಷ್ಟು ಮನೆಗಳು ಇವೆ ಎಂದು ನಾನು ಗಮನಿಸಿರುವುದಿಲ್ಲ.

ಪಾಟೀ ಸವಾಲು ಶ್ರೀ ಎಂ ಕೆ ವೈ ವಕೀಲರಿಂದಃ **1** ನೇ ಆರೋಪಿಯ ಪರವಾಗಿ

6 ವರ್ಷದಿಂದ ಏರ್ ಟೆಲ್ ಕಂಪನಿಯಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ನಾನು ಈಗ ಬಟ್ಟೆ ಅಂಗಡಿಯಲ್ಲಿ ಸೀತಾರಾಮ ಚೌಟರಿ ಹತ್ತಿರ ನಾನು ನನ್ನ ಸ್ವಂತ ಅಂಗಡಿಯನ್ನು ಇಟ್ಟಿರುತ್ತೇನೆ. ನಾನು ತಿಪಟೂರು ವಾಸಿ. 2019 ರವರೆಗೂ ಏರ್ ಟೆಲ್ ಕಂಪನಿಯಲ್ಲಿ ಕೆಲಸ ಮಾಡ್ತುದ್ದೆ. ನನಗೆ ಮೊಬೈಲ್ ಬಗ್ಗೆ ಎಲ್ಲಾ ವ್ಯವಹಾರಿಕ ಜ್ಞಾನ ಇದೆ ಎಂದರೆ ಸರಿ. ನನಗೆ ಮೊಬೈಲ್ ಹೆಸರು ಮ್ಯಾನಿಫ್ಯಾಕ್ಚರಿಂಗ್ ಕಂಪನಿ ಮತ್ತು ಐಎಂವಿ ಬಗ್ಗೆ ಮಾಹಿತಿ ಇದೆ. ನಾನು ಮತ್ತು ನನ್ನ ಸ್ನೇಹಿತನಾದ ಸುಹಾಸ್ ಅವರ ಜೊತೆ ನಾನು ಇವತ್ತು ನ್ಯಾಯಾಲಯಕ್ಕೆ ಬಂದಿದ್ದೇನೆ. ಸುಹಾಸನ ತಂದೆ ಅಶೋಕ್ ರವರ ಅಂಗಡಿ ದೊಡ್ಡಪೇಟೆಯಲ್ಲಿ ಇದೆ ಎಂದರೆ ಸರಿ. ನಾನು ಮತ್ತು ಸುಹಾಸ್ ರವರ ತಂದೆ ವಿಶ್ವಾಸದಲ್ಲಿ ಇದೀವಿ ಎಂದರೆ ಸರಿ. ನಾನು ಕೆ ಬಿ ಕ್ರಾಸ್ ಸ್ಪೆಂಡರ್ ದ್ವಿಚಕ್ರ ವಾಹನದಲ್ಲಿ ಹೋಗಿರುತ್ತೇನೆ ಅದರ ಸಂಖ್ಯೆ ನನಗೆ ಗೊತ್ತಿಲ್ಲ ನಾನು ಕೆ.ಬಿ ಕ್ರಾಸ್ ಗೆ ಹೋಗಿರುವಾಗ 11 ಗಂಟೆ ಆಗಿರುತ್ತದೆ ಆದರೆ ಎಷ್ಟು ಸಮಯಕ್ಕೆ ಹೋಗಿರುತ್ತೇನೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಪೊಲೀಸರು ಏನೇನು ನಡವಳಿಕೆ ಮಹಜರ್ ಮಾಡುವ ಸಮಯದಲ್ಲಿ ನನಗೆ ಮರೆತು ಹೋಗಿದೆ ಎಂದರೆ ಸರಿ. ಯಾವ ಉದ್ದೇಶಕ್ಕೋಸ್ಕರ ಕೆ.ಬಿ ಕ್ರಾಸ್ ಗೆ ಹೋಗುತ್ತಿದ್ದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ತುಮಕೂರಿಗೆ ಹೋಗಲು ಹೋಗಿರುತ್ತೇನೆ. ನಾನು ಠಾಣೆ ಹತ್ತಿರ ಹೋಗುವಾಗ ನನ್ನನ್ನು ಕರೆದಿರುತ್ತಾರೆ. ನಾನು ತಿಪಟೂರ್ ಗೆ ಸೇರಿದವರು ಎಂದು ಪೊಲೀಸರಿಗೆ ಗೊತ್ತಿಲ್ಲ. ನಾನು ಎಷ್ಟು ಸಮಯಕ್ಕೆ ಠಾಣೆಗೆ ಹೋಗಿದೀನಿ ಎಂದು ನನಗೆ ಗೊತ್ತಿಲ್ಲ. ಠಾಣೆಯಲ್ಲಿ ಎಷ್ಟು ಜನ ಇದದರು ಎಂದು ಸಾಕ್ಷಿ ತುಂಬಾ ವರ್ಷ ಆಗಿದ್ದರಿಂದ ನೆನಪಿಲ್ಲ ಎನ್ನುತ್ತಾರೆ. ನನ್ನ ಹೇಳಿಕೆಯಲ್ಲಿ ಚಾಸಾ-2 ಆದ ಎಸ್ ಮಲ್ಲಿಕಾರ್ಜುನ ರವರು ನನಗೆ ಗೊತ್ತು ಎಂದು ಹೇಳಿದೀನಿ ಆದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ . ಸಾಕ್ಷಿ ಅವರ ಹೇಳಿಕೆಯನ್ನು ತಿಳಿಸಿರುವಂತೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಮಸಾಂತಿ ಗೂಡ್ಲು ವಾಸಿ ಮಲ್ಲಿಕಾರ್ಜುನ ಎನ್ನುವವರು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಕೊಟ್ಟಿರುವುದರಿಂದ ಅವರ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಗಿದೆ. ನಾನು ನನ್ನ ದಿಚ್ವಕ್ರ ವಾಹನವನ್ನು ಪೊಲೀಸ್ ಠಾಣೆಯಲ್ಲಿ ನಿಲ್ಲಿ ಅವರ ಜೊತೆ ಹೋಗಿರುತ್ತೇನೆ. ನಾನು ಠಾಣೆಗೆ ಹೋಗಿ ಅಲ್ಲಿಂದ ಅರ್ಧ ಗಂಟೆ ಇದ್ದು ಸ್ಥಳಕ್ಕೆ ಹೋಗಿರುತ್ತೇನೆ. ನನ್ನ ಜೊತೆ ಪೊಲೀಸರು ಅವರ ಸಮವಸ್ತ್ರದಲ್ಲಿ ಸ್ಥಳಕ್ಕೆ ಬಂದಿರುತ್ತಾರೆ. ಎಷ್ಟು ಜನ ಪೊಲೀಸರು ಸ್ಥಳಕ್ಕೆ ಬಂದು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿರುವ ರಾಜ್ಯ ಹೆದ್ದಾರಿನ ಅಥವಾ ರಾಷ್ಟ್ರೀಯ ಹೆದ್ದಾರಿನ ಎಂದರೆ ಸಾಕ್ಷಿ ರಾಜ್ಯ ಹೆದ್ದಾರಿ ಎನ್ನುತ್ತಾರೆ. ಬೀದರ್ ನಿಂದ ಶ್ರೀರಂಗ ಪಟ್ಟಣಕ್ಕೆ ಹೋಗುವ ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಕೆ ಬಿ ಕ್ರಾಸ್ ಸರ್ಕಲ್ ನಿಂದ ಎಡಭಾಗಕ್ಕೆ ಹೋಗಿ ಅಲ್ಲಿಂದ ಗೋಡೆ ಕೆರೆಗೆ 20 ನಿಮಿಷಕ್ಕೆ ಹೋಗಿರುತ್ತೇನೆ. ಕೆ ಬಿ ಕ್ರಾಸ್ ನಿಂದ ಕೃತ್ಯ ನಡೆದ ಸ್ಥಳಕ್ಕೆ

6-7 ಕಿ.ಮೀ ಇದೆ.  ನಾನು ಜೀಪಿನಲ್ಲಿ ಹಿಂದೆ ಕೂತಿದ್ದೆ. ಜೀಪಿನಲ್ಲಿ ಎಷ್ಟು ಜನ ಇದ್ದರು ಎಂದು ಪ್ರಶ್ನಿಸಿದಾಗ ಸಾಕ್ಷಿ ಪುಲ್ ಆಗಿತ್ತು  ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ನಿಪಿ-3 ಮತ್ತು 4 ರಲ್ಲಿ ಏನು ಬರೆದಿದಾರೆ ಎನ್ನುವುದು ನನಗೆ ನಿಖರವಾಗಿ ಗೊತ್ತಿಲ್ಲ. ಪೊಲೀಸರು ಮಹಜರನ್ನು ಬರೆಯಲು ಮತ್ತು ಉಳಿದಿರುವ ಫಾರ್ಮಲಿಟೀಸನ್ನು ಮುಗಿಸಲು ಅರ್ಧ ಗಂಟೆ ಆಗಿರುತ್ತದೆ. ನಂತರ ನಾನು ತುಮಕೂರಿಗೆ ಹೋಗಿ ಪ್ರಶ್ನಿಸಿದಾಗ ನಾನು ಅವತ್ತು ಹೋಗಿಲ್ಲ ಎನ್ನುತ್ತಾರೆ. ಮಹಜರ್ ಆದ ನಂತರ ನೇರ ತಿಪಟೂರಿಗೆ ಬಂದಿರುತ್ತೇನೆ. ನಿಪಿ-3 ಮತುತ 4 ನ್ನು ಬರೆದಿದ್ದರೋ ಅಥವಾ ಬೆರಳಚ್ಚು ಮಾಡಿದ್ದಾರೆ ಎನ್ನುವುದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ.  ನಾನು ಆ ದಿನ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಅಮಾನತ್ತು ಮಹಜರ್ ಗೆ ಸಹಿಯನ್ನು ಮಾಡುವುದರ ಬಗ್ಗೆ ಪೊಲೀಸರು ಚಿತ್ರೀಕರಣ ಮಾಡಿರುವುದಿಲ್ಲ ಆದರೆ ಪೋಟೋವನ್ನು ತೆಗೆದಿರುಎತ್ತಾರೆ. ನಾನು ಹೋಗುವುದಕ್ಕಿಂತ ಮುಂಚೆನೇ ಕಾರು ಠಾಣೆಯ ಆವರಣದಲ್ಲಿತ್ತು. ನಾನು ನೋಡುವಾಗ ಕಾರಿಗೆ ಯಾವುದೇ ರೀತಿ ಡ್ಯಾಮೇಜ್ ಆಗಿರಲಿಲ್ಲ ಆದರೆ ಅದು ನಿಂತಿತ್ತು. ಕಾರಿನ ಡಿಕ್ಕಿ ಅಥವಾ ಡೋರ್ ಓಪನ್ ಇತ್ತ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ. ಕಾರಿನ ಢಿಕ್ಕಿ ಮತ್ತು ಡೋರನ್ನು ಯಾರು ಓಪನಿ ಮಾಡಿದರು ಎಂದು ನಗನೆ ಗೊತ್ತಿಲ್ಲ. ಕಾರಿನ ಮೇಲೆ ಮೊಬೈಲ್, ಮಚ್ಚು, ಹಣ ಇಟ್ಟಿದ್ದರು. ಅಮೌಂಟನ್ನು ಓಪನ್ ಮಾಡಿ ಕಾರಿನ ಮೇಲೆ ಇಟ್ಟಿರುತ್ತಾರೆ. ಎಷ್ಟೆಷ್ಟು ಡಿನಾಮಿನೇಷನ್ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಮಚ್ಚಿನ ಮೇಲೆ ಏನಾದರೂ ಹೆಸರು ಇತ್ತ ಎಂದರೆ ಹೆಸರು ಯಾವುದು ಇಲ್ಲ ಮತ್ತು ಇವತ್ತು ನ್ಯಾಯಾಲಯದ ಮುಂದೆ ಯಾವುದೆ ವಸ್ತುಗಳು ಇಲ್ಲ ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಈ ಕೇಸಿನಲ್ಲಿ ಅಮಾನತ್ತು ಪಡಿಸಿಕೊಂಡಿರುವ ವಸ್ತುಗಳನ್ನು ಹುಳಿಯಾರು ಪೊಲೀಸ್ ಠಾಣೆಗೆ ಕ್ರೈ ನಂ. 41/2017 ರಲ್ಲಿ  ವರ್ಗಾವಣೆ ಆಗಿದೆ ಎನ್ನುತ್ತಾರೆ ಅದರಿಂದ ಇವತ್ತು ನ್ಯಾಯಾಲಯದ ಮುಂದೆ ಯಾವುದೇ ಅಮಾನತ್ತು ಪಡಿಸಿಕೊಂಡಿರುವ ವಸ್ತುಗಳನ್ನು  ಸಾಕ್ಷಿಯ ಹೇಳಿಕೆಯನ್ನು ಮಾಡುವ ಸಮಯದಲ್ಲಿ ಇರಲಿಲ್ಲ. ಅಮೌಂಟನ್ನು ರಬ್ಬರ್ ಬ್ಯಾಂಡ್ ಹಾಕಿ ಇಟ್ಟಿದ್ದರು. ಯಾವ ದಿಕ್ಕಿನಲ್ಲಿ ಕಾರನ್ನು ನಿಲ್ಲಿಸಿದ್ದರು ಎಂದು ಪ್ರಶ್ನಿಸಿದಾಗ ಸಾಕ್ಷಿ ದಕ್ಷಿಣ ಮುಖವಾಗಿ ನಿಲ್ಲಿಸಿರುತ್ತಾರೆ. ಅಮಾನತ್ತು ಪಡಿಸಿಕೊಂಡಿರುವ ಕಾರಿನ ಬಣ್ಣ ಬಿಳಿ ಆಗಿತ್ತು ಅದರ ಸಂಖ್ಯೆ  ನಿಪಿ-3 ರಲ್ಲಿ ನಮೂದು ಮಾಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಮೂದು ಮಾಡಿರುವುದಿಲ್ಲ ಎನ್ನುತ್ತಾರೆ. ನಾನು ಸ್ಥಳಕ್ಕೆ ಹೋಗಿಲ್ಲ ಠಾಣೆಯಲ್ಲೇ ಇದ್ದು ನಿಪಿ-3 ಮತ್ತು 4 ನ್ನು ತಯಾರಿ ಮಾಡಿದ್ದಾರೆ ಮತ್ತು ನನ್ನ ಸ್ನೇಹಿತನಾದ ಸುಹಾಸ್ ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷವನ್ನು ನುಡಿತಾ ಇದ್ದೀನಿ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಿ ಎಫ್ ನಲ್ಲಿ ನಮೂದು ಮಾಡಿರುವ 1 ರಿಂದ 3, 8 ನೇ ಐಟಂಗಳು ಇಲ್ಲೇ ಇದೆ ಎನ್ನುತ್ತಾರೆ, 4 ಮತ್ತು 5 ನೇ ಐಟಂಗಳು ಹುಳಿಯಾರು ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿರುತ್ತಾರೆ ಎನ್ನುತ್ತಾರೆ.**

ಪಾಟೀ ಸವಾಲು ಶ್ರೀ ಹೆಚ್ ಎಲ್ ಎಸ್ ವಕೀಲರಿಂದಃ 1 ಮತ್ತು 2 ನೇ ಮತ್ತು ಆರೋಪಿತರ ಪರವಾಗಿ ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.